ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ
ಸಿ ಸಿ ನಂಬರ :802/2019
CW-3 PW-2

| | |
|---|---|
| ಹೆಸರು | : ಲಿಂಬಣ್ಣ ರಾಠೋಡ |
| ತಂದೆಯ ಹೆಸರು | : ದ್ಯಾಂಪಲಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಪಾನ್ ಶಾಪ್ |
| ವಾಸಸ್ಥಳ | : ಗಜೇಂದ್ರಗಡ |

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 10-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1 ಬಿ ಎಂದು ಗುರುತಿಸಲಾಯಿತು. ಸುಮಾರು ಸನ್ 2018 ರಲ್ಲಿ ಫ್ರೆಂಡ್ಸ ಬಾರ್ ಹತ್ತಿರ ಸದರಿ ಸಹಿಯನ್ನು ಮಾಡಿರುತ್ತೇನೆ. ಅಲ್ಲಿ ಕಳ್ಳತನವಾಗಿತ್ತು. ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು ಅವರು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ದಿನಾಂಕಃ 31.07.2018 ರಂದು ಬೆಳಿಗಿನ ಜಾವ 02.45 ಗಂಟೆ ಸುಮಾರಿಗೆ ಫ್ರೆಂಡ್ಸ ಬಾರ್‌ನ ಸೆಟ್ರಸ್ ಮುರಿದು ಒಳಗೆ ಹೋಗಿ ಹಣ ಕಳ್ಳತನ ಮಾಡಲು ಸೆಟ್ರಸ್ ಮುರಿದಿದ್ದು, ಒಳಗೆ ಹಣ ಇಲ್ಲದ್ದರಿಂದ ಡ್ರಾ ತೆಗೆದು ನೋಡಲಾಗಿ ಹಣ ಸಿಗದಿದ್ದರಿಂದ ಕಳ್ಳತನ ಮಾಡಲು ಪ್ರಯತ್ನ ಮಾಡಿದ್ದರು ಎಂದು ದೂರುದಾರರು ದೂರು ಕೊಟ್ಟ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ.3 ರವರ ಸಮಕ್ಷಮ ಸಂಜೆ 05 ರಿಂದ 06 ಗಂಟೆಯವರೆಗೆ ಪಂಚನಾಮೆ ಮಾಡಿದರು ಎಂದರೆ ಸರಿ.

**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದಃ** ಶ್ರೀ. ಎಸ್.ಬಿ.ಹೆಚ್.

ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪಂಚನಾಮೆ ಬರೆದ ವಿಷಯದ ನನಗೆ ಮಾಹಿತಿ ಇಲ್ಲ. ಪೊಲೀಸ್ ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆ ಯಾರು ಬರೆದರು ಮತ್ತು ಎಲ್ಲಿ ಬರೆದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಶಾಲೆ ಕಲಿತಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಏನು ಘಟನೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರಗೆ ಸಹಿ ಮಾಡಿದ್ದು ನನಗೆ ವಯಕ್ತಿಕ ಮಾಹಿತಿ ಇಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ
ಸಿ ಸಿ ನಂಬರ :802/2019
CW-2 PW-1

ಹೆಸರು : ಕಾರ್ತಿಕ ರಾಯಬಾಗಿ
ತಂದೆಯ ಹೆಸರು : ಪರಶುರಾಮ
ವಯಸ್ಸು : 32 ವರ್ಷ
ಉದ್ಯೋಗ : ಖಾಸಗಿ ಉದ್ಯೋಗಿ
ವಾಸಸ್ಥಳ : ಗಜೇಂದ್ರಗಡ

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 10-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. ಸುಮಾರು 7-8 ವರ್ಷಗಳ ಹಿಂದೆ ಪ್ರೆಂಡ್ಸ ಬಾರ್ ನಲ್ಲಿ ಕಳ್ಳತನವಾಗಿತ್ತು ಎಂದು ನನಗೆ ಹೇಳಿರುತ್ತಾರೆ. ಪೊಲೀಸರು ಸದರಿ ಬಾರ್‌ಗೆ ಬಂದು ವಿಚಾರಣೆ ಮಾಡಿ ಕಳ್ಳತನವು ಆದ ಕುರಿತು ನೀನು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ.3 ರವರು ಸಹಿ ಮಾಡಿರುತ್ತಾರೆ. ಪೊಲೀಸರು ಕೌಂಟರ್ ಚೆಕ್ ಮಾಡಿದ್ದು, ಅಲ್ಲಿ ಏನು ಸಿಕ್ಕಿಲ್ಲ ಕಳ್ಳತನ ಮಾಡಲು ಪ್ರಯತ್ನಿಸಿದ್ದಾರೆ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದಃ** ಶ್ರೀ. ಎಸ್.ಬಿ.ಹೆಚ್.

ಘಟನಾ ಸ್ಥಳದಲ್ಲಿ ನಮ್ಮ ಸಹಿಯನ್ನು ಏಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಏನು ಘಟನೆ ನಡೆದಿದೆ ಎಂದು ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ. ಚಾಸಾ.1 ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.